# ದಿನಾಂಕ: 17-07-2010ರಂದು ಪೂರ್ವಾಹ್ನ: 11-00 ಗಂಟೆಗೆ ಹೇಮಾವತಿ ಸಭಾಂಗಣ, ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳು

**ಅಧ್ಯಕ್ಷತೆ: ಶ್ರೀ ಎಸ್.ದ್ಯಾವೇಗೌಡ**

**ಅಧ್ಯಕ್ಷರು**

**ಸಾಮಾನ್ಯ ಸ್ಥಾಯಿ ಸಮಿತಿ**

ಹಾಜರಿ:07 ಗೈರು ಹಾಜರಿ:00

| ಕ್ರಸಂ | ವಿಷಯ | ಚರ್ಚೆ | ತೀರ್ಮಾನ |
|---|---|---|---|
| | | ಮುಖ್ಯ ಯೋಜನಾಧಿಕಾರಿಯವರು ಸಭೆಯಲ್ಲಿ ಹಾಜರಿದ್ದ ಮಾನ್ಯ ಸಮಿತಿ ಅಧ್ಯಕ್ಷರು, ಸದಸ್ಯರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು ಕೋರಿದರು. | |
| 1 | ಬೇಲೂರು ತಾಲ್ಲೂಕು ಉಪ ವಿಭಾಗದಲ್ಲಿರುವ ಅನುಪಯುಕ್ತ ಸಾಮಗ್ರಿಗಳ ವಿಲೇವಾರಿ ಮಾಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆಡಳಿತ (1)156-ವಾಹನ/2009-10 ದಿನಾಂಕ:06-05-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಬೇಲೂರು ಕಛೇರಿಯ ಉಗ್ರಾಣದಲ್ಲಿರುವ ರೂ.95,079.00ಗಳ(68774.00 + 28305.00) ಗಳ ಮೊತ್ತದ ಅನುಪಯುಕ್ತ ವಸ್ತುಗಳನ್ನು ಬಹಿರಂಗ ಹರಾಜು ಮಾಡಲು ಅನುಮತಿ ನೀಡುವಂತೆ ಹಾಗೂ ರೂ.4086.00ಗಳ ಮೊತ್ತದ ಅನುಪಯುಕ್ತ ವಸ್ತುಗಳ ಮೌಲ್ಯವನ್ನು ಮನ್ನಾ ಮಾಡಲು ಕೋರಿ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ಇಂಜಿನಿಯರಿಂಗ್ ವಿಭಾಗ, ಹಾಸನ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.<br>ಮಾನ್ಯ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರುಗಳು ಜಿಲ್ಲೆಯ ವಿವಿಧ ಇಲಾಖೆಗಳು ಹಾಗೂ ಎರಡೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಳಲ್ಲಿರುವ ಅನುಪಯುಕ್ತ ವಸ್ತುಗಳು, ಉಪಯೋಗಿಸದೆ ಇರುವ ವಾಹನಗಳು ಹಾಗೂ ಇತರೆ ಅನುಪಯುಕ್ತ ವಸ್ತುಗಳನ್ನು ಬಹಿರಂಗ ಹರಾಜು ಮಾಡಿ ವಿಲೇವಾರಿ ಮಾಡಲು ಎರಡೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಅಭಿಯಂತರರು ಮತ್ತು ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರು ಕ್ರಮ ವಹಿಸಬೇಕೆಂದು ತಿಳಿಸಿದರು. | ವಿಷಯದ ಬಗ್ಗೆ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲೆಯ ವಿವಿಧ ಇಲಾಖೆಗಳು ಹಾಗೂ ಎರಡೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಳಲ್ಲಿರುವ ಅನುಪಯುಕ್ತ ವಸ್ತುಗಳು, ಉಪಯೋಗಿಸದೆ ಹಾಗೆ ಇರುವ ವಾಹನಗಳು ಹಾಗೂ ಇತರೆ ಅನುಪಯುಕ್ತ ವಸ್ತುಗಳನ್ನು ಬಹಿರಂಗ ಹರಾಜು ಮಾಡಿ. ವಿಲೇವಾರಿ ಮಾಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಬೇಲೂರು ಕಛೇರಿಯ ಉಗ್ರಾಣದಲ್ಲಿರುವ ರೂ.95,079.00ಗಳ(68774.00 + 28305.00) ಗಳ ಮೊತ್ತದ ಅನುಪಯುಕ್ತ ವಸ್ತುಗಳನ್ನು ಬಹಿರಂಗ ಹರಾಜು ಮಾಡಲು ಅನುಮತಿ ನೀಡಲು ಹಾಗೂ ರೂ.4086.00ಗಳ ಮೊತ್ತದ ಅನುಪಯುಕ್ತ ವಸ್ತುಗಳ ಮೌಲ್ಯವನ್ನು |

| | | | |
|---|---|---|---|
| | | | ಮನ್ನಾ ಮಾಡಲು ಕಾರ್ಯಪಾಲಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಇವರು ಸಲ್ಲಿಸಿರುವ ಪ್ರಸ್ತಾವನೆಗೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |
| 2 | 5054ರ ಗ್ರಾಮೀಣ ವಿಶೇಷ ಅಭಿವೃದ್ಧಿ ಯೋಜನೆಯಡಿ ರಸ್ತೆ ಮತ್ತು ಸಏತುವೆ ಅಭಿವೃದ್ಧಿ ಬಗ್ಗೆ | ಟಿಪ್ಪಣಿ ಸಂಖ್ಯೆ: ಜಿಪಂಹಾ/(ಯೋವಿ(3)/ 5054-01/ ವಿಅಯೋರಸ್ತೆ ಸೇತುವೆ/59/2010-11 ದಿನಾಂಕ: 03-06-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಮುಖ್ಯ ಯೋಜನಾಧಿಕಾರಿಯವರು ಮಾತನಾಡುತ್ತಾ, ಜಿಲ್ಲಾ ಪಂಚಾಯಿತಿಗಳಿಗೆ 2010-11ನೇ ಸಾಲಿಗೆ 5054 ಗ್ರಾಮೀಣ ಸಂಪರ್ಕ ವಿಶೇಷ ಅಭಿವೃದ್ಧಿ ಯೋಜನೆಯಡಿ ಅನುದಾನ ನಿಗದಿಪಡಿಸಲಾಗಿದ್ದು, ಹಾಸನ ಜಿಲ್ಲಾ ಪಂಚಾಯಿತಿಗೆ 5 ತಾಲ್ಲೂಕುಗಳಿಗೆ ಮಾತ್ರ ರೂ.282.14 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ. ಸದರಿ ಅನುದಾನಕ್ಕೆ ಮುಂದುವರೆದ ಮತ್ತು ಹೊಸ ಕಾಮಗಾರಿಗಳ ಕ್ರಿಯಾ ಯೋಜನೆ ತಯಾರಿಸುವ ಬಗ್ಗೆ ವಿಷಯವನ್ನು ಸಾಮಾನ್ಯ ಸ್ಥಾಯಿ ಸಮಿತಿ ಸಭೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ವಿವರ ಒದಗಿಸಿದರು.<br>ಮುಂದುವರೆದು, ಮುಂದುವರೆದ ಕಾಮಗಾರಿಗಳಿಗೆ ಅನುದಾನವನ್ನು ವಿನಿಯೋಗಿಸಿ ಉಳಿದ ಅನುದಾನಕ್ಕೆ ಹೊಸ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಕಳುಹಿಸುವಂತೆ ಮತ್ತು ತಾಲ್ಲೂಕುಗಳಿಗೆ ನಿಗದಿಪಡಿಸಿರುವ ಅನುದಾನವನ್ನು ಆಯಾ ತಾಲ್ಲೂಕುಗಳಿಗೆ ಮಾತ್ರ ವಿನಿಯೋಗಿಸಲು ಮಾರ್ಗಸೂಚಿಗಳನ್ನು ಸರ್ಕಾರದಿಂದ ನೀಡಿದ್ದು, ಒಂದು ತಾಲ್ಲೂಕಿನ ಅನುದಾನವನ್ನು ಇನ್ನೊಂದು ತಾಲ್ಲೂಕಿಗೆ ವಿನಿಯೋಗಿಸಲು ಅವಕಾಶವಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು.<br>ಮಾನ್ಯ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳು 5054 ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿ ಮುಂದುವರೆದ ಕಾಮಗಾರಿಗಳಿಗೆ ಅನುದಾನವನ್ನು ವಿನಿಯೋಗಿಸಿ ಉಳಿಕೆಯಾಗುವ ಅನುದಾನದ ಒಂದೂವರೆ ಪಟ್ಟು ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವುದು ಅವಶ್ಯಕವೆಂದು ಅಭಿಪ್ರಾಯಪಟ್ಟರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>2010-11ನೇ ಸಾಲಿಗೆ 5054 ಗ್ರಾಮೀಣ ಸಂಪರ್ಕ ವಿಶೇಷ ಅಭಿವೃದ್ಧಿ ಯೋಜನೆಯಡಿ ಜಿಲ್ಲೆಯ 5 ತಾಲ್ಲೂಕುಗಳಿಗೆ ನಿಗದಿಪಡಿಸಿರುವ ರೂ.282.14ಲಕ್ಷಗಳಲ್ಲಿ 5 ತಾಲ್ಲೂಕುಗಳಲ್ಲಿರುವ ಮುಂದುವರೆದ ಕಾಮಗಾರಿಗಳಿಗೆ ಅವಶ್ಯವಿರುವ ಅನುದಾನವನ್ನು ವಿನಿಯೋಗಿಸಿ ಉಳಿಕೆ ಅನುದಾನದ ಒಂದೂವರೆ ಪಟ್ಟು ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಕಾಮಗಾರಿಗಳನ್ನು ಅನುಷ್ಠಾನ ಮಾಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 3 | 2010-11ನೇ ಸಾಲಿಗೆ ಆರ್ಥಿಕ ವರ್ಷಕ್ಕಾಗಿ ಯೋಜನೇತರ ಹುದ್ದೆಗಳನ್ನು ಮುಂದುವರೆಸುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆ(8) ತಾ.ಹು.ಮಂ/ 28/2010-11 ದಿನಾಂಕ: 05-06-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಇಲ್ಲಿನ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಆಡಳಿತ 2235-02-001-0-06(ಯೋಜನೇತರ) ಶೀರ್ಷಿಕೆಯಡಿ 10 ಹುದ್ದೆಗಳನ್ನು ಮುಂದುವರಿಕೆಗಾಗಿ 2010-11ನೇ | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಉಪ ನಿರ್ದೇಶಕರು, ಕೋರಿರುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಇಲ್ಲಿಯ ಅಧಿಕಾರಿ ಮತ್ತು ಸಿಬ್ಬಂದಿ |

| | | | |
|---|---|---|---|
| | | ಸಾಲಿಗೆ ಆಡಳಿತಾತ್ಮಕ ಮಂಜೂರಾತಿ ಅವಶ್ಯಕವಾಗಿರುವುದರಿಂದ, ಮುಂದುವರಿಕೆಯ ಆದೇಶ ನೀಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.<br>ಮಾನ್ಯ ಸದಸ್ಯರಾದ ಶ್ರೀ ಸಿ.ಎನ್.ಬಾಲಕೃಷ್ಣ ರವರು ಮಾತನಾಡುತ್ತಾ, ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಯೋಜನೆಯಡಿಯಲ್ಲಿ ಪ್ರತಿ ಅಂಗನವಾಡಿ ಕೇಂದ್ರಕ್ಕೆ ಗ್ರಾಮಗಳ ನೈರ್ಮಲ್ಯ ಮತ್ತು ಇತರೆ ತುರ್ತು ಕೆಲಸಗಳಿಗಾಗಿ ರೂ.10000.00ಗಳನ್ನು ಬಿಡುಗಡೆ ಮಾಡಿದ್ದು, ಸದರಿ ಹಣವನ್ನು ಸಮರ್ಪಕವಾಗಿ ವಿನಿಯೋಗಿಸಿರುವುದಿಲ್ಲ. ಆದ್ದರಿಂದ, ಹೊಸದಾಗಿ ಆಯ್ಕೆಯಾಗಿರುವ ಗ್ರಾಮ ಪಂಚಾಯಿತಿ ಅಧ್ಯಕ್ಷರೊಂದಿಗೆ ಚರ್ಚಿಸಿ ಅವಶ್ಯ ಕೆಲಸಗಳಿಗೆ ವಿನಿಯೋಗಿಸಲು ಕ್ರಮ ವಹಿಸುವಂತೆ ಅಂಗನವಾಡಿ ಕಾರ್ಯಕರ್ತೆಯರಿಗೆ ನಿರ್ದೇಶನ ನೀಡಬೇಕೆಂದು ಉಪ ನಿರ್ದೇಶಕರಿಗೆ ತಿಳಿಸಿದರು.<br>ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡುತ್ತಾ, ಜಿಲ್ಲೆಯಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನ ಯೋಜನೆಯಡಿಯಲ್ಲಿ ಸುಮಾರು 71 ಗ್ರಾಮಗಳನ್ನು ಕೇಂದ್ರೀಯ ಅಧಿಕಾರಿಗಳು ಪರಿಶೀಲನೆ ನಡೆಸಲಿದ್ದಾರೆ. ಆದ್ದರಿಂದ, ಸದರಿ ಗ್ರಾಮಗಳಲ್ಲಿ ಶಾಲಾ ಶೌಚಾಲಯ/ ಸಮುದಾಯ ಶೌಚಾಲಯ ಮತ್ತು ವೈಯಕ್ತಿಕ ಶೌಚಾಲಯಗಳನ್ನು ಪರಿಶೀಲಿಸಿ ಅವಶ್ಯ ದುರಸ್ಥಿಯನ್ನು ಮಾಡಲು ಸಂಬಂಧಪಟ್ಟ ಎಲ್ಲಾ ಕಿರಿಯ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಮತ್ತು ಚನ್ನರಾಯಪಟ್ಟಣ ಇವರು ಕ್ರಮ ವಹಿಸಬೇಕೆಂದು ತಿಳಿಸಿದರು.<br>ಮಾನ್ಯ ಸದಸ್ಯರಾದ ಶ್ರೀ ಸಿ.ಎನ್.ಬಾಲಕೃಷ್ಣರವರು ಮಾತನಾಡುತ್ತಾ, ಜಿಲ್ಲೆಯಲ್ಲಿ ಡೆಂಗ್ಯೂ ಜ್ವರ ಮತ್ತು ಚಿಕೂನ್ ಗುನ್ಯಾ ರೋಗ ಹೆಚ್ಚಾಗಿ ಕಂಡು ಬರುತ್ತಿದ್ದು, ಇದರಿಂದ, ಗ್ರಾಮೀಣ ಪ್ರದೇಶದ ಜನರಿಗೆ ಬಹಳ ತೊಂದರೆಯಾಗಿರುತ್ತದೆ. ಆದ್ದರಿಂದ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಕಾರ್ಯಕರ್ತೆಯರು ಜನರಿಗೆ ತಿಳುವಳಿಕೆ ನೀಡಿ ರೋಗಗಳ ನಿಯಂತ್ರಣಕ್ಕೆ ಅಗತ್ಯ ಕ್ರಮ ವಹಿಸಬೇಕೆಂದು ತಿಳಿಸಿದರು. | ವರ್ಗದವರಿಗೆ ಆಡಳಿತ 2235-02-001-0-06(ಯೋಜನೇತರ) ಶೀರ್ಷಿಕೆಯಡಿ 10 ಹುದ್ದೆಗಳನ್ನು 2010-11ನೇ ಸಾಲಿಗೆ ಮುಂದುವರಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 4 | 3054ಮುಖ್ಯ ಮಂತ್ರಿ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿ ದಿನಗೂಲಿ ನೌಕರರ ವೇತನ ಪಾವತಿ ಬಗ್ಗೆ | ಟಿಪ್ಪಣಿ ಸಂಖ್ಯೆ: ಜಿಪಂಹಾ/ ಯೋವಿ(3)3054ಚಿಸೌವೇ30-31 2010-11 ದಿನಾಂಕ: 02-06-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಮುಖ್ಯ ಯೋಜನಾಧಿಕಾರಿಯವರು ಮಾತನಾಡುತ್ತಾ, ಸರ್ಕಾರದ ಸುತ್ತೋಲೆಯಲ್ಲಿ ಜಿಲ್ಲಾ ಪಂಚಾಯಿತಿ ಅಧೀನದಲ್ಲಿ ಬರುವ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ/ ಉಪ ವಿಭಾಗಗಳ ವಿವಿಧ ವರ್ಗದ ದಿನಗೂಲಿ ನೌಕರರಿಗೆ ವೇತನವನ್ನು 2010-11ನೇ | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>2010-11ನೇ ಸಾಲಿಗೆ 3054 ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಮತ್ತು ಸೇತುವೆ ಕಾರ್ಯಕ್ರಮಕ್ಕೆ ನಿಗದಿಯಾಗಿರುವ ರೂ.199.80 |

| | | | |
|---|---|---|---|
| | | ಸಾಲಿನ ಆಯವ್ಯಯದಲ್ಲಿ ಜಿಲ್ಲಾ ಪಂಚಾಯಿತಿಗೆ ನಿಗದಿಯಾದ ಲೆಕ್ಕಶೀರ್ಷಿಕೆ 3054-80-196-1-02 ಗ್ರಾಮೀಣ ರಸ್ತೆ ಮತ್ತು ಸೇತುವೆ ಕಾರ್ಯಕ್ರಮದ ಅನುದಾನದಲ್ಲಿಯೇ (ರೂ.199-80ಲಕ್ಷ) ಭರಿಸಲು ತಿಳಿಸಲಾಗಿರುತ್ತದೆ. ಮುಖ್ಯ ಲೆಕ್ಕಾಧಿಕಾರಿಗಳು ಜಿಲ್ಲಾ ಪಂಚಾಯಿತಿ ಹಾಸನ ಇವರು ದಿನಗೂಲಿ ನೌಕರರ ವೇತನ ಬಿಡುಗಡೆಗಾಗಿ ಹಂಚಿಕೆ ಮಾಡಲು ಕೋರಿರುತ್ತಾರೆ ಹಾಗೂ ಮುಖ್ಯ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರು ಸದರಿ ಅನುದಾನಕ್ಕಾಗಿ ನೇರವಾಗಿ ಸರ್ಕಾರಕ್ಕೆ ಪತ್ರ ಬರೆಯುವಂತೆ ತಿಳಿಸಿರುತ್ತಾರೆ. ಸರ್ಕಾರದ ಸುತ್ತೋಲೆಯಂತೆ ದಿನಗೂಲಿ ನೌಕರರ ವೇತನಕ್ಕಾಗಿ ಸುಮಾರು ರೂ.89.00ಲಕ್ಷಗಳ ಅನುದಾನ ಬೇಕಾಗಿದ್ದು, ಸ್ಥಾಯಿ ಸಮಿತಿ ನಿರ್ಣಯಕ್ಕೆ ಮಂಡಿಸಿದೆ ಹಾಗೂ 2010-11ರ ಸಾಲಿಗೆ 3054 ರ ಮುಂದುವರೆದ ಕಾಮಗಾರಿಗಳಿಗೆ ಸುಮಾರು ರೂ.218.49ಲಕ್ಷಗಳ ಅನುದಾನ ಅವಶ್ಯಕವಾಗಿ ಬೇಕಾಗಿದ್ದು, ಸಮಿತಿ ನಿರ್ಣಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಲಕ್ಷಗಳಲ್ಲಿ ಸರ್ಕಾರದ ಸುತ್ತೋಲೆಯಂತೆ ದಿನಗೂಲಿ ನೌಕರರ ವೇತನಕ್ಕೆ ಅವಶ್ಯವಿರುವ ರೂ.89.00ಲಕ್ಷಗಳನ್ನು ವಿನಿಯೋಗಿಸಲು ಮತ್ತು ಉಳಿಕೆ ಅನುದಾನವನ್ನು ಮುಂದುವರೆದ ಕಾಮಗಾರಿಗಳಿಗೆ ವಿನಿಯೋಗಿಸಿ ಕೊರತೆ ಯಾಗುವ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 5 | 2010-11ನೇ ಸಾಲಿನ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ | ಟಿಪ್ಪಣಿ ಸಂಖ್ಯೆ: ಜಿಪಂಹಾಯೋವಿ(3) 27-02 ಕೆರೆ ಅಭಿವೃದ್ಧಿ ಕ್ರಿ.ಯೋ/ 2010-11 ದಿನಾಂಕ: 15-07-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>2010-11ನೇ ಸಾಲಿಗೆ 2702-01-101-0-72 ಕೆರೆ ಅಭಿವೃದ್ಧಿ ಕಾರ್ಯಕ್ರಮದ ಲೆಕ್ಕಶೀರ್ಷಿಕೆಯಡಿ ನಿಗದಿಯಾದ ರೂ.169.70 ಲಕ್ಷಗಳ ಅನುದಾನಕ್ಕೆ ಹಾಸನ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಅತಿ ಅವಶ್ಯಕವಾದ ಕೆರೆ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಕ್ರಿಯಾ ಯೋಜನೆಯನ್ನು ತಯಾರಿಸಿ ಅನುಷ್ಠಾನ ಪಡಿಸಬೇಕಾಗಿರುವುದರಿಂದ, ಸದರಿ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದ್ದು ದಿನಾಂಕ: 17-07-2010ರಂದು ನಡೆಯುವ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ಅನುಮೋದನೆಗಾಗಿ ಟಿಪ್ಪಣಿ ಮಂಡಿಸಿದೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವವಾಗಿ ಚರ್ಚಿಸಲಾಯಿತು.<br>2010-11ನೇ ಸಾಲಿಗೆ 2702-01-101-0-72 ಕೆರೆ ಅಭಿವೃದ್ಧಿ ಕಾರ್ಯಕ್ರಮದ ಲೆಕ್ಕಶೀರ್ಷಿಕೆಯಡಿ ನಿಗದಿಯಾದ ರೂ.169.70 ಲಕ್ಷಗಳ ಅನುದಾನಕ್ಕೆ ಹಾಸನ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಅತಿ ಅವಶ್ಯಕವಾದ ಕೆರೆ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಅನುಷ್ಠಾನ ಮಾಡಲು ಸಿದ್ದಪಡಿಸಿರುವ ಕ್ರಿಯಾ ಯೋಜನೆಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. |
| 6 | 2010-11ನೇ ಸಾಲಿನ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್ಗಾರ್ ವಿಶೇಷ ಯೋಜನೆಯಡಿಯಲ್ಲಿ ಜಿಲ್ಲೆಯಲ್ಲಿ ಸ್ತ್ರೀ ಶಕ್ತಿ / ಸ್ವಸಹಾಯ ಸಂಘಗಳಲ್ಲಿ ಉತ್ಪನ್ನ ಮಾಡಲಾದ ವಿವಿಧ | ಟಿಪ್ಪಣಿ ಸಂಖ್ಯೆ: ಜಿಪಂಹಾ/ ಎಸ್.ಜಿ.ಎಸ್.ವೈ/ ಸಿ.ಆರ್-46/2010-11 ದಿನಾಂಕ: 16-07-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಕೇಂದ್ರ ಗ್ರಾಮೀಣ ಮಂತ್ರಾಲಯ ಮತ್ತು ರಾಜ್ಯ ಸರ್ಕಾರಗಳು ಸ್ವರ್ಣ ಜಯಂತಿ ಗ್ರಾಮ ಸ್ವರೋಜ್ಗಾರ್ ವಿಶೇಷ ಯೋಜನೆಯಡಿಯಲ್ಲಿ ಜಿಲ್ಲೆಯಲ್ಲಿ ಸ್ತ್ರೀ ಶಕ್ತಿ / ಸ್ವಸಹಾಯ ಸಂಘಗಳಲ್ಲಿ ಉತ್ಪನ್ನ ಮಾಡಲಾದ ವಿವಿಧ ವಸ್ತುಗಳಿಗೆ ಉತ್ತಮವಾಗಿ ಮಾರುಕಟ್ಟೆ ಸೌಲಭ್ಯವನ್ನು ಒದಗಿಸಲು ನಗರದಲ್ಲಿ ಅಂದಾಜು ವೆಚ್ಚ ರೂ.1.50ಕೋಟಿಗಳಲ್ಲಿ ಜಿಲ್ಲಾ | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಪರಿಶೀಲಿಸಲಾಯಿತು.<br>ಕೇಂದ್ರ ಮತ್ತು ರಾಜ್ಯ ಸರ್ಕಾರದ ಪತ್ರ ಮತ್ತು ಮಾರ್ಗಸೂಚಿ ಅನ್ವಯ ನಗರದ ಬಿ.ಎಂ ರಸ್ತೆ ಪಕ್ಕದಲ್ಲಿ ಇರುವ ವಯಸ್ಕರ ಶಿಕ್ಷಣ ಇಲಾಖೆಯ ಕಟ್ಟಡವನ್ನು ನೆಲಸಮ ಗೊಳಿಸಿ |

| | | | |
|---|---|---|---|
| | ವಸ್ತುಗಳಿಗೆ ಉತ್ತಮವಾಗಿ ಮಾರುಕಟ್ಟೆ ಸೌಲಭ್ಯವನ್ನು ಒದಗಿಸಲು ನಗರದಲ್ಲಿ ಅಂದಾಜು ವೆಚ್ಚ ರೂ.1.50 ಕೋಟಿಗಳಲ್ಲಿ ಜಿಲ್ಲಾ ಮಾರಾಟ ಮಳಿಗೆಯನ್ನು ಹಾಲಿ ಇರುವ ವಯಸ್ಕರ ಶಿಕ್ಷಣ ಇಲಾಖೆಯ ಕಛೇರಿ ಕಟ್ಟಡದ ಸ್ಥಳದಲ್ಲಿ ನಿರ್ಮಾಣ ಮಾಡುವ ಕುರಿತಂತೆ | ಮಾರಾಟ ಮಳಿಗೆಯನ್ನು ನಿರ್ಮಿಸಬೇಕಾಗಿರುತ್ತದೆ. ಸದರಿ ಮಳಿಗೆ ನಿರ್ಮಿಸಲು ಸೂಕ್ತ ನಿವೇಶನವು ಬೇಕಾಗಿರುತ್ತದೆ. ಈ ವಿಷಯಕ್ಕೆ ಕುರಿತಂತೆ ಪರಿಶೀಲಿಸಲಾಗಿ ಹಾಸನ ನಗರದ ಬಿ.ಎಂ ರಸ್ತೆ ಪಕ್ಕದಲ್ಲಿ ವಯಸ್ಕರ ಶಿಕ್ಷಣ ಇಲಾಖೆ ಇದ್ದು, ಸದರಿ ಇಲಾಖೆಯ ಕಟ್ಟಡವು ಶಿಥಿಲಾವಸ್ಥೆಯಲ್ಲಿದ್ದು, ಕಟ್ಟಡದ ಮೇಲ್ಛಾವಣಿ ಹೆಂಚಿನಿಂದ ಕೂಡಿರುತ್ತದೆ. ನಿವೇಶನದ ವಿಸ್ತೀರ್ಣ ಪೂರ್ವ ಪಶ್ಚಿಮಕ್ಕೆ 75 ಅಡಿ ಮತ್ತು ಉತ್ತರ ದಕ್ಷಿಣಕ್ಕೆ 57 ಅಡಿ ಇರುತ್ತದೆ. ಸದರಿ ಕಟ್ಟಡವು ಹಳೆಯದಾಗಿದ್ದು, ಶಿಥಿಲಾವಸ್ಥೆಯಲ್ಲಿರುವುದರಿಂದ, ಈ ಕಟ್ಟಡವನ್ನು ನೆಲಸಮಗೊಳಿಸಿ ಅಂದಾಜು ವೆಚ್ಚ ರೂ.1.50ಕೋಟಿಗಳಲ್ಲಿ ಜಿಲ್ಲಾ ಮಾರಾಟ ಮಳಿಗೆಯನ್ನು ನಿರ್ಮಿಸಬಹುದಾಗಿರುತ್ತದೆ. ನಿರ್ಮಿಸುವ ಈ ಮಳಿಗೆಯಲ್ಲಿ ವಯಸ್ಕರ ಶಿಕ್ಷಣ ಇಲಾಖೆಯ ಕಛೇರಿಗೆ ಅಗತ್ಯ ಸ್ಥಳವನ್ನು ಸಹ ನೀಡಬಹುದಾಗಿರುತ್ತದೆ. ಸದರಿ ಜಾಗದಲ್ಲಿ ಮಳಿಗೆಯನ್ನು ನಿರ್ಮಿಸುವುದರಿಂದ, ಮಾರಾಟಕ್ಕೆ ಅನುಕೂಲವಾಗಿರುತ್ತದೆ.<br>ಆದ್ದರಿಂದ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಪತ್ರ ಮತ್ತು ಮಾರ್ಗಸೂಚಿ ಅನ್ವಯ ನಗರದ ಬಿ.ಎಂ ರಸ್ತೆ ಪಕ್ಕದಲ್ಲಿ ಇರುವ ವಯಸ್ಕರ ಶಿಕ್ಷಣ ಇಲಾಖೆಯ ಕಟ್ಟಡವನ್ನು ನೆಲಸಮಗೊಳಿಸಿ ಹಾಲಿ ಲಭ್ಯವಿರುವ ನಿವೇಶನದ ವಿಸ್ತೀರ್ಣ ಪೂರ್ಣ ಪಶ್ಚಿಮಕ್ಕೆ 75 ಅಡಿ ಮತ್ತು ಉತ್ತರ ದಕ್ಷಿಣಕ್ಕೆ 57 ಅಡಿವುಳ್ಳ ಸ್ಥಳದಲ್ಲಿ ಅಂದಾಜು ವೆಚ್ಚ ರೂ.1.50ಕೋಟಿಗಳಲ್ಲಿ ಜಿಲ್ಲಾ ಮಾರಾಟ ಮಳಿಗೆಯನ್ನು ನಿರ್ಮಿಸುವ ಕುರಿತು ಹಾಗೂ ಮಳಿಗೆಯಲ್ಲಿ ವಯಸ್ಕರ ಶಿಕ್ಷಣ ಇಲಾಖೆಗೆ ಅಗತ್ಯವಿರುವ ಸ್ಥಳವನ್ನು ನೀಡುವುದರಿಂದ, ಸದರಿ ಇಲಾಖೆಯ ಅಧೀನದಲ್ಲಿರುವ ನಿವೇಶನವನ್ನು ಪಡೆಯುವ ಬಗ್ಗೆ ವಿಷಯವನ್ನು ಸಾಮಾನ್ಯ ಸ್ಥಾಯಿ ಸಮಿತಿ ನಿರ್ಣಯಕ್ಕೆ ಮಂಡಿಸಿದೆ. | ಹಾಲಿ ಲಭ್ಯವಿರುವ ನಿವೇಶನದ ವಿಸ್ತೀರ್ಣ ಪೂರ್ಣ ಪಶ್ಚಿಮಕ್ಕೆ 75 ಅಡಿ ಮತ್ತು ಉತ್ತರ ದಕ್ಷಿಣಕ್ಕೆ 57 ಅಡಿವುಳ್ಳ ಸ್ಥಳವಲ್ಲಿ ಅಂದಾಜು ವೆಚ್ಚ ರೂ.1.50ಕೋಟಿಗಳಲ್ಲಿ ಜಿಲ್ಲಾ ಮಾರಾಟ ಮಳಿಗೆಯನ್ನು ನಿರ್ಮಿಸುವ ಕುರಿತು ಹಾಗೂ ಮಳಿಗೆಯಲ್ಲಿ ವಯಸ್ಕರ ಶಿಕ್ಷಣ ಇಲಾಖೆಗೆ ಅಗತ್ಯವಿರುವ ಸ್ಥಳ ವನ್ನು ನೀಡಿ ಸದರಿ ಇಲಾಖೆಯ ಅಧೀನದಲ್ಲಿರುವ ನಿವೇಶನವನ್ನು ಪಡೆಯಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | | |
| 1 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಛೇರಿಯನ್ನು ಈಗ ಇರುವ ಕಟ್ಟಡದಿಂದ ಬೇರೆ ಕಟ್ಟಡಕ್ಕೆ ವರ್ಗಾಯಿಸುವ ಬಗ್ಗೆ. | ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಇವರು ಸಭೆಯಲ್ಲಿ ಮಾತನಾಡುತ್ತಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಛೇರಿಯನ್ನು ಕೆ.ಆರ್.ಪುರಂನಲ್ಲಿರುವ ಶ್ರೀ ದಿವಾಕರಬಾಬು ಇವರ ಮಾಲೀಕತ್ವದ ಕಟ್ಟಡದಲ್ಲಿ ಬಾಡಿಗೆಯನ್ನು ನೀಡಿ ನಡೆಸಲಾಗುತ್ತಿತ್ತು. ಆದರೆ, ಕಟ್ಟಡದ ಮಾಲೀಕರು ಕಟ್ಟಡವನ್ನು ತೆರವುಗೊಳಿಸಿಕೊಡಬೇಕೆಂದು ತಿಳಿಸಿರುವುದರಿಂದ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಛೇರಿಯನ್ನು ಬೇರೆ ಬಾಡಿಗೆ ಕಟ್ಟಡಕ್ಕೆ ವರ್ಗಾವಣೆ ಮಾಡಬೇಕಾಗಿದ್ದು, ಸಮಿತಿಯ ಅನುಮೋದನೆ ನೀಡಬೇಕೆಂದು ಕೋರಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಪರಿಶೀಲಿಸಲಾಯಿತು.<br>ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಇವರು ಕೋರಿರುವಂತೆ ಕಛೇರಿಯನ್ನು ಬೇರೆ ಬಾಡಿಗೆ ಕಟ್ಟಡಕ್ಕೆ ವರ್ಗಾಯಿಸುವ ಬಗ್ಗೆ ಬಾಡಿಗೆಯನ್ನು ನಿಗದಿಪಡಿಸುವ ಬಗ್ಗೆ ಸಮಿತಿ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಸಂಪೂರ್ಣ ಅಧಿಕಾರವನ್ನು ನೀಡಲಾಯಿತು. |

| | | | |
|---|---|---|---|
| 2 | ಜಿಲ್ಲಾ ಪಂಚಾಯಿತಿ ಹೇಮಾವತಿ ಸಭಾಂಗಣದ ಆಧುನೀಕರಣ ಮತ್ತು ಹೊಯ್ಸಳ ಸಭಾಂಗಣದಲ್ಲಿರುವ ಮೈಕ್ ವ್ಯವಸ್ಥೆಯ ನವೀಕರಣದ ಬಗ್ಗೆ | ಯೋಜನಾ ಅಂದಾಜು ಮತ್ತು ಮೌಲ್ಯಮಾಪನ ಅಧಿಕಾರಿಯವರು ಸಭೆಯಲ್ಲಿ ಪ್ರಸ್ತಾಪಿಸುತ್ತಾ, ಜಿಲ್ಲಾ ಪಂಚಾಯಿತಿ ಹಾಸನ ಇಲ್ಲಿಯ ಹೇಮಾವತಿ ಸಭಾಂಗಣದಲ್ಲಿ ಆಗಿಂದ್ದಾಗ್ಗೆ ವಿವಿದ ಸಭೆಗಳು/ ಕಾರ್ಯಾಗಾರಗಳು ನಡೆಯುತ್ತಿದ್ದು, ಈಗ ಇರುವ ಪೀಠೋಪಕರಣಗಳು ಮತ್ತು ಇತರೆ ಸೌಲಭ್ಯಗಳು ಸಮರ್ಪಕವಾಗಿರುವುದಿಲ್ಲ ಆದ್ದರಿಂದ, ಸಭಾಂಗಣವನ್ನು ಆಧುನೀಕರಣಗೊಳಿಸಬೇಕಾಗಿರುತ್ತದೆ. ಹಾಗೂ ಹೊಯ್ಸಳ ಸಭಾಂಗಣದಲ್ಲಿ ಹಾಲಿ ಇರುವ ಮೈಕ್ ವ್ಯವಸ್ಥೆಯಲ್ಲಿ ಧ್ವನಿಯು ಸಮರ್ಪಕವಾಗಿ ಕೇಳಿಸದಿರುವ ಕಾರಣ ಮೈಕ್ ವ್ಯವಸ್ಥೆಯನ್ನು ನವೀಕರಣಗೊಳಿಸಬೇಕಾಗಿದ್ದು, ಈ ಸಂಬಂಧ ಅಂದಾಜು ರೂ.15.00ಲಕ್ಷದವರೆಗೆ ವೆಚ್ಚವಾಗುವ ನಿರೀಕ್ಷೆಯಿರುತ್ತದೆ. ಪ್ರಸಕ್ತ ಸಾಲಿಗೆ ಜಿಲ್ಲಾ ಪಂಚಾಯಿತಿ ಕಟ್ಟಡ ನಿರ್ಮಾಣ ಲೆಕ್ಕಶೀರ್ಷಿಕೆ 2515 ರಡಿ ನಿಗದಿಯಾಗಿರುವ ರೂ.15.00ಲಕ್ಷಗಳನ್ನು ಹೇಮಾವತಿ ಸಭಾಂಗಣದ ಆಧುನೀಕರಣ ಮತ್ತು ಹೊಯ್ಸಳ ಸಭಾಂಗಣದ ಮೈಕ್ ವ್ಯವಸ್ಥೆಯ ನವೀಕರಣಕ್ಕೆ ವಿನಿಯೋಗಿಸಿ ಕಾಮಗಾರಿಯನ್ನು ಅನುಷ್ಟಾನ ಮಾಡಲು ಸ್ಥಾಯಿ ಸಮಿತಿಯ ಅನುಮೋದನೆಗೆ ಟಿಪ್ಪಣಿಯನ್ನು ಮಂಡಿಸಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಪ್ರಸಕ್ತ ಸಾಲಿನ ಜಿಲ್ಲಾ ಪಂಚಾಯಿತಿ ಕಟ್ಟಡ ನಿರ್ಮಾಣ ಲೆಕ್ಕಶೀರ್ಷಿಕೆ 2515ರಡಿ ನಿಗದಿಯಾಗಿರುವ ರೂ.15.00ಲಕ್ಷ(ರೂಪಾಯಿ ಹದಿನೈದು ಲಕ್ಷಗಳು ಮಾತ್ರ)ಗಳ ವೆಚ್ಚದಲ್ಲಿ ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿಯ ಹೇಮಾವತಿ ಸಭಾಂಗಣದ ಆಧುನೀಕರಣ ಮತ್ತು ಹೊಯ್ಸಳ ಸಭಾಂಗಣದ ಮೈಕ್ ವ್ಯವಸ್ಥೆಯ ನವೀಕರಣ ಕಾಮಗಾರಿಯನ್ನು ಅನುಷ್ಟಾನ ಮಾಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| | | ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. | |

(ಎಸ್ ದ್ಯಾವೇಗೌಡ)
ಅಧ್ಯಕ್ಷರು
ಸಾಮಾನ್ಯ ಸ್ಥಾಯಿ ಸಮಿತಿ
ಜಿಲ್ಲಾ ಪಂಚಾಯಿತಿ, ಹಾಸನ